ಅ) ಯು.ಕೆ.ಪಿ.ಗೆ ವಿಶ್ವ ಬ್ಯಾಂಕ್ ನೆರವಿನಿಂದ ನೀಡಲಾದ ಹಣವೆಷ್ಟು; ಹಾಗೂ ನೆರವು ಮುಂದುವರೆಯುತ್ತಿದೆಯೇ;

ಆ) ಕಳೆದ ಎರಡು ವರ್ಷದಲ್ಲಿ ಸರ್ಕಾರವು ಬಿಡುಗಡೆ ಮಾಡಿದ ಹಣವೆಷ್ಟು;

ಇ) ಇದರಲ್ಲಿ ಖರ್ಚಾದ ಹಣವೆಷ್ಟು ಹಾಗೂ ಬಾಕಿ ಉಳಿದ ಹಣವೆಷ್ಟು;

ಈ) ಎಷ್ಟು ಹೆಕ್ಟೇರ್ ಜಮೀನಿಗೆ ನೀರು ಒದಗಿಸಲಾಗಿದೆ;

ಉ) ಈ ಯೋಜನೆ ಪೂರ್ತಿಗೊಳಿಸಿದರೆ ಒಟ್ಟು ಎಷ್ಟು ಸಾವಿರ ಹೆಕ್ಟೇರಿಗೆ ನೀರು ಒದಗಿಸಲು ಗುರಿ ಹಾಕಿಕೊಳ್ಳಲಾಗಿದೆ;

ಊ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣಾ (ಉಪ ಮುಖ್ಯಮಂತ್ರಿಗಳು):–

ಅ) ಕೃಷ್ಣಾ ನೋಲ್ಡಂಡೆ ಯೋಜನೆ ಮೊದಲ ಘಟ್ಟದ 2ನೇ ಹಂತಕ್ಕೆ 245 ಮಿಲಿಯನ್ ಡಾಲರ್‌ಗಳ ನೆರವನ್ನು ವಿಶ್ವ ಬ್ಯಾಂಕ್ ನೀಡಲಿದೆ. ಯೋಜನೆಯಿಂದ ನಿರ್ವಸತಿ ಹೊಂದುವ ಜನರ ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ನವೆಂಬರ್ 1992ರಿಂದ ನೆರವನ್ನು ವಿಶ್ವ ಬ್ಯಾಂಕ್ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ವಿಶ್ವ ಬ್ಯಾಂಕ್‌ನವರ ನಿಬಂಧನೆಗಳೆಲ್ಲವನ್ನೂ ಈಗ ಒಪ್ಪಿಕೊಂಡಿರುವುದರಿಂದ ನೆರವನ್ನು ಸಧ್ಯದಲ್ಲೇ ಪುನರಾರಂಭಿಸುವುದಕ್ಕೆ ಶಿಫಾರಸ್ಸು ಮಾಡುವುದಾಗಿ ವಿಶ್ವ ಬ್ಯಾಂಕ್ ಪರಿವೀಕ್ಷಣಾ ತಂಡವು ಆಶ್ವಾಸನೆ ನೀಡಿದೆ.

ಆ) ಮತ್ತು ಇ) ವಿವರಗಳು ಕೆಳಗಿನಂತಿವೆ:–

ವರ್ಷ	ಆಯವ್ಯಯದಲ್ಲಿ ಸೂಚಿಸಿದ ಮೊತ್ತ	ಬಿಡುಗಡೆ ಮಾಡಿ ಖರ್ಚಾದ ಮೊತ್ತ
1990–91	80 ಕೋಟಿ ರೂ.	69.08 ಕೋಟಿ ರೂ.
1991–92	107 ಕೋಟಿ ರೂ.	98.15 ಕೋಟಿ ರೂ.

ಈ) ಈ ಯೋಜನೆಯಿಂದ ಮಾರ್ಚ್ 92ರವರೆಗೆ 1,29,606 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಉ) ಈ ಯೋಜನೆಯ ಮೊದಲ ಘಟ್ಟದಿಂದ ಒಟ್ಟು 4,25,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಗುರಿ ಇದೆ.

ಊ) ಮೊದಲ ಘಟ್ಟದ ಯೋಜನೆಯನ್ನು 1998ರ ವೇಳೆಗೂ ಮತ್ತು 2ನೇ ಘಟ್ಟದ ಯೋಜನೆಯನ್ನು 2000 ಇಸವಿ ವೇಳೆಗೂ ಪೂರ್ಣಗೊಳಿಸುವ ಉದ್ದೇಶವಿದೆ.

ಹುಬ್ಬಳ್ಳಿ–ಧಾರವಾಡ ರಾಷ್ಟ್ರೀಯ ಹೆದ್ದಾರಿ ರಸ್ತೆ ಕೆಲಸ ಪ್ರಾರಂಭಿಸುವುದು.

441 (1273): ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ - ಧಾರವಾಡ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯು ಎಷ್ಟು ಕಿ.ಮೀ. ತಗೆಯುಕೊಳ್ಳಲಾಗಿದೆ. ಸದರಿ ಕೆಲಸವು ಎಂದು ಪ್ರಾರಂಭವಾಗಿದೆ; ಮತ್ತು ಕೆಲಸಕ್ಕೆ ಎಷ್ಟು ಕಿ.ಮೀ. ರಸ್ತೆ ದುರಸ್ತಿಯಾಗಿದೆ, ಹಾಗೂ ಈಗ ಎಷ್ಟು ಹಣ ವಿಲೇವಾರಿ ಮಾಡಲಾಗಿದೆ.

ಆ) ಸದರಿ ರಸ್ತೆಯನ್ನು ಎಷ್ಟು ದಿವಸಗಳಲ್ಲಿ ಪೂರ್ತಿಗೊಳಿಸಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹುಬ್ಬಳ್ಳಿ--ಧಾರವಾಡ (ರಾಷ್ಟ್ರೀಯ ಹೆದ್ದಾರಿ ನಂ.4) ಬೈಪಾಸ್ ರಸ್ತೆ ನಿರ್ಮಾಣದ ಪ್ರಥಮ ಹಂತದ 17.425ಕಿ.ಮೀ. ಉದ್ದದ ರಸ್ತೆಯ ಸಿ.ಡಿ. ಕೆಲಸವನ್ನು 1987ರಲ್ಲೂ ಹಾಗೂ ಬಲ್ಲಿ ಡಾಂಬರ್ ಕೆಲಸವನ್ನು 1990ರಲ್ಲೂ ಪ್ರಾರಂಭಿಸಲಾಗಿದೆ. ಈ 17.425 ಕಿ.ಮೀ. ರಸ್ತೆಯ ಸಿ.ಡಿ. ಕೆಲಸವು ಮುಗಿದಿರಿ: ಈ ಕಾಮಗಾರಿಗೆ ಈವರೆಗೆ ಸುಮಾರು 350 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ಆ) ಪ್ರಥಮ ಹಂತದ 17.425ಕಿ.ಮೀ. ದೂರದ ಬೈಪಾಸ್ ರಸ್ತೆ ಕೆಲಸವನ್ನು ಡಿಸೆಂಬರ್ 1993ರ ಬೇಳೆಗೆ ಮುಗಿಸುವ ಸಂಭವ ಇದೆ.

ಕೃಷ್ಣ-ಕಾವೇರಿ ಯೋಜನೆಗೆ ಖರ್ಚಾದ ಹಣ

442 (1307): ಶ್ರೀ ಬಾಟಾಳ್ ನಾಗರಾಜ್ (ಚಾಮರಾಜನಗರ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಕೃಷ್ಣಾ ಕಾವೇರಿ ಯೋಜನೆಗಳಿಗೆ ಇದುವರೆಗೆ ಮಾಡಿರುವ ಖರ್ಚೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) 1992ರ ಡಿಸಂಬರ್ ಅಂತ್ಯದವರೆಗೆ ಮಾಡಿರುವ ಖರ್ಚು

	(ಕೋಟಿ ರೂ.ಗಳಲ್ಲಿ)
1. ಕೃಷ್ಣಾ ಯೋಜನೆಗಳು	1987.55
2. ಕಾವೇರಿ ಯೋಜನೆಗಳು	1243.23

ಬೆಂಗಳೂರಿನಿಂದ -- ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿ.

447 (1278): ಶ್ರೀ ಡಿ.ಕೆ. ಶಿವಕುಮಾರ (ಸಾತನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಿಂದ ಕನಕಪುರ - ಮಳವಳ್ಳಿ, ಮೈಸೂರು ಮುಖಾಂತರ ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿಯನ್ನು ಸ್ಥಾಪಿಸಲು ಸರ್ಕಾರದ ಯೋಜನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಹೆದ್ದಾರಿ ಸ್ಥಾಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್. (ಲೋಕೋಪಯೋಗಿ ಸಚಿವರು):-

ಅ) ಇದೆ.

ಆ) ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಬಗ್ಗೆ ಶೀಘ್ರ ನಿರ್ಧಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚ

448 (1328): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ):-